ವಿಜಯ ಕರ್ನಾಟಕ. 12.1.18 Page no. IV

# ವಿದ್ಯುದ್ದೀಕರಣ ಮಾರ್ಗ ಸಜ್ಜು

■ **ಶಾಂತ ತಮ್ಮಯ್ಯ** ಬೆಂಗಳೂರು

ವಿದ್ಯುದ್ದೀಕರಣಗೊಂಡಿರುವ ಬೆಂಗಳೂರು-ಮೈಸೂರು ನಡುವಿನ ರೈಲು ಮಾರ್ಗದ ಉದ್ಘಾಟನೆಗೆ ಕ್ಷಣಗಣನೆ ಆರಂಭವಾಗಿದ್ದು, ಮಾಲಿನ್ಯ ನಿಯಂತ್ರಣ ಆದರೂ ರೈಲಿನ ವೇಗ ನಿರೀಕ್ಷಿತಮಟ್ಟದಲ್ಲಿರುವುದಿಲ್ಲ ಎನ್ನಲಾಗಿದೆ.

ರೈಲು ಮಾರ್ಗ ವಿದ್ಯುದ್ದೀಕರಣದಿಂದ ಮಾಲಿನ್ಯ ನಿಯಂತ್ರಣದ ಜತೆ ವೇಗ ಹೆಚ್ಚಳದಿಂದ ಪ್ರಯಾಣಿಕರ ಸಮಯ ಉಳಿತಾಯ ಆಗುತ್ತದೆ ಎಂಬ ಆಶಯ ಹೊಂದಲಾಗಿತ್ತು. ಆದರೆ ಮಾರ್ಗದುದ್ದಕ್ಕೂ ಇರುವ ತಿರುವುಗಳಿಂದಾಗಿ ಯೋಜನೆ ಉದ್ದೇಶ ಪರಿಪೂರ್ಣವಾ ಗುವುದಿಲ್ಲ ಎಂಬ ಅಭಿಪ್ರಾಯ ಸಾರ್ವಜನಿಕರಿಂದ ವ್ಯಕ್ತವಾಗಿದೆ.

**50 ಸಾವಿರ ಉಳಿತಾಯ:** ಬೆಂಗಳೂರು ಹಾಗೂ ಮೈಸೂರು ನಡುವೆ 139 ಕಿ.ಮೀ. ಇದ್ದು ಈ ಮಾರ್ಗದಲ್ಲಿ ನಿತ್ಯ ಸುಮಾರು 15 ರೈಲುಗಳು ಸಂಚರಿಸುತ್ತವೆ. ಆದರೆ, ಎಲ್ಲಾ ರೈಲುಗಳಿಗೂ ವಿದ್ಯುತ್‌ಚಾಲಿತ ಎಂಜಿನ್ ಇಲ್ಲ, ಮೊದಲ ಹಂತದಲ್ಲಿ ಸದ್ಯ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಮಾತ್ರ ಇದನ್ನು ಅಳವಡಿಸಲಾಗಿದೆ.

ಈ ರೈಲು ಸದ್ಯ ಡೀಸೆಲ್‌ನಿಂದ ಓಡುತ್ತಿದ್ದು, ಒಮ್ಮೆ ಮೈಸೂರಿಗೆ ಹೋಗಿ ವಾಪಸ್ ಬರಲು 1400 ಲೀಟರ್ ಡೀಸೆಲ್ ಬಳಕೆಯಾಗುತ್ತಿದ್ದು, ಲೀಟರ್‌ಗೆ 60 ರೂ.ನಂತೆ ಲೆಕ್ಕ ಹಾಕಿದರೂ ಅಂದಾಜು 84 ಸಾವಿರ ರೂ. ವೆಚ್ಚ ತಗುಲಲಿದೆ. ವಿದ್ಯುದೀಕರಣದಿಂದ ಇದೇ ಪ್ರಯಾಣಕ್ಕೆ ಸುಮಾರು 40 ಸಾವಿರ ರೂ. ವೆಚ್ಚವಾಗಲಿದ್ದು, ಸುಮಾರು 40 ರಿಂದ 50 ಸಾವಿರ ರೂ. ಉಳಿತಾಯ ಆಗಲಿದೆ. ಅಂದರೆ ದಿನಕ್ಕೆ ಲಕ್ಷಾಂತರ ರೂ.ಉಳಿತಾಯವಾಗಲಿದೆ. ಯೋಜನೆಗೆ 213 ಕೋಟಿ ರೂ. ವೆಚ್ಚವಾಗಿದ್ದು ಈ ಮಾರ್ಗದಲ್ಲಿ ಸಂಚರಿಸುವ ಎಲ್ಲಾ 15 ರೈಲುಗಳಿಗೂ ವಿದ್ಯುದೀಕರಣ ವ್ಯವಸ್ಥೆ ಅಳವಡಿಸಿದರೆ ಇಲಾಖೆಗೆ ಭಾರೀ ಉಳಿತಾಯವಾಗಲಿದೆ.



## ಬೋಗಿ ಅಳವಡಿಕೆ

ರೈಲು ಮಾರ್ಗ ವಿದ್ಯುದೀಕರಣದಿಂದ ಮಾಮೂಲಿ ರೈಲಿಗಿಂತ ವೇಗ ಹೆಚ್ಚುವುದರಿಂದ ಹೊಸದಾಗಿ ಹೆಚ್ಚುವರಿ ಬೋಗಿ ಅಳವಡಿಸಲು ಸಾಧ್ಯವಾಗುತ್ತದೆ. ಈ ನಿಟ್ಟನಲ್ಲಿ ಇಲಾಖೆ ಗಮನ ಹರಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

● ಸದ್ಯ ಬೆಂಗಳೂರು-ಚೆನ್ನೈ ನಡುವೆ ಸಂಚರಿಸುವ ಶತಾಬ್ದಿ ರೈಲಿಗೆ ವಿದ್ಯುದೀಕರಣ ಅಳವಡಿಸಲಾಗುತ್ತಿದೆ. ಈ ರೈಲು ಬೆಂಗಳೂರು-ಮೈಸೂರಿನ ನಡುವೆ ಸಂಚರಿಸುವಾಗ ಮಾತ್ರ ವಿದ್ಯುತ್ ಎಂಜಿನ್ ಬಳಕೆ ಆಗಲಿದೆ. ಮಾರ್ಚ್ ಅಂತ್ಯದ ವೇಳೆಗೆ ಎಕ್ಸ್‌ಪ್ರೆಸ್, ಸಾಮಾನ್ಯ ರೈಲು ಸೇರಿ ನಾಲ್ಕು ರೈಲುಗಳಿಗೆ ಈ ತಂತ್ರಜ್ಞಾನ ಅಳವಡಿಸಲಿದ್ದು, ಅಗತ್ಯ ಸಿದ್ಧತೆ ನಡೆದಿದೆ.

**- ವಿಜಯ** ಹಿರಿಯ ಸಾರ್ವಜನಿಕ ಸಂಪರ್ಕಾಧಿಕಾರಿ, ಹುಬ್ಬಳ್ಳಿ

● ರೈಲು ಮಾರ್ಗ ವಿದ್ಯುದೀಕರಣದಿಂದ ನೇರ ಮಾರ್ಗದಲ್ಲಿ ವೇಗ ಹೆಚ್ಚಲಿದೆ. ಮಾಲಿನ್ಯ ನಿಯಂತ್ರಣ, ಹಣಕಾಸು ಉಳಿತಾಯ ಆಗಲಿದೆ.

**- ಕೆ.ಎಸ್‌ಕೃಷ್ಣಪ್ರಸಾದ್** ಕರ್ನಾಟಕ ರೈಲ್ವೆ ಪ್ರಯಾಣಿಕರ ವೇದಿಕೆ ಮುಖಂಡರು.

---

# ಇಂದಿನಿಂದ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್.ಆರ್.ಬಂಡೆ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಡೆಯಲಿರುವ ಕಾರಣ ಜ.12ರಿಂದ 31ರ ವರೆಗೆ ಬೆಳಿಗ್ಗೆ 6 ರಿಂದ ರಾತ್ರಿ 10ರ ವರೆಗೆ ಹಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಲ್ಲೆಲ್ಲಿ ವ್ಯತ್ಯಯ: ಶ್ರೀನಿವಾಸ ಲೇಔಟ್, ಕೆಎಚ್‌ಬಿ ಕ್ವಾರ್ಟ್ರಸ್, ಭೀಮಣ್ಣ ಲೇಔಟ್, ಆದಿತ್ಯನಗರ, ಮುನಿಸ್ವಾಮಪ್ಪ ಲೇಔಟ್, ಸಾಕಮ್ಮ ಹನುಮಂತಪ್ಪ ಲೇಔಟ್, ಅಂಬೇಡ್ಕರ್ ನಗರ, ಚಿನ್ನಣ್ಣ ಲೇಔಟ್, ಕಾವೇರಿ ನಗರ, ಶ್ಯಾಮನಗೌಡ ರಸ್ತೆ. ಆನಂದ ಗೋಕುಲ ಲೇಔಟ್, ಆದರ್ಶ ನಗರ, ಬಿಲಾಲ್ ಮಸೀದಿ ಪ್ರದೇಶ, ಡಿಫೆನ್ಸ್ ಕಾಲೊನಿ, ಎಲ್.ಆರ್.ಬಂಡೆ ಮುಖ್ಯ ರಸ್ತೆ, ಎಚ್‌ಬಿಆರ್ 2ನೇ ಹಂತ, ನಂದಗೋಕುಲ ಲೇಔಟ್, ಮುನಿವೀರಪ್ಪ ಲೇಔಟ್.

ಪೆರಿಯಾರ್ ನಗರ, ಮುಸ್ಲಿಂ ಕಾಲೊನಿ, ಸಂಪಂಗಿರಾಮಯ್ಯ ಬ್ಲಾಕ್, ಗಾಂಧಿನಗರ, ದೊಡ್ಡಣ್ಣ ಲೇಔಟ್,



ವೆಂಕಟೇಶಪುರ, ಅನ್ವರ್ ಲೇಔಟ್, ಬಸವನಗರ, ರತನ್ ಸಿಂಗ್ ಲೇಔಟ್, ಸುಲ್ತಾನ್ ಪಾಳ್ಯ, ಆತ್ಮಾನಂದ ಕಾಲೊನಿ, ಬೃಂದಾವನ ಲೇಔಟ್, ನಂಜಮ್ಮ ಲೇಔಟ್, ಮಂಗಲಕ್ಷ್ಮಿ ದೇವಸ್ಥಾನ ಪ್ರದೇಶ, ಕನಕನಗರ, ಪಟೇಲ್ ಮುನಿಯಪ್ಪ ಲೇಔಟ್, ದೇವರಜೀವನಹಳ್ಳಿ, ಟ್ಯಾಂಕ್ ಮೊಹಲ್ಲಾ, ದೊಡ್ಡಣ್ಣನಗರ, ಕಾವಲ್‌ಭೈರಸಂದ್ರ, ಬಾಬು ರೆಡ್ಡಿ ಲೇಔಟ್, ಭುವನೇಶ್ವರಿನಗರ, ಮನೋರಾಯನಪಾಳ್ಯ, ತುಳಸಮ್ಮ ಲೇಔಟ್, ಸುವರ್ಣ ಲೇಔಟ್, ಆಚಾರ್ಯ ಕಾಲೇಜ್ ರಸ್ತೆ.

ಕೃಷ್ಣಪ್ಪ ಲೇಔಟ್, ಗೊಲ್ಲಪ್ಪ ಲೇಔಟ್, ಹನುಮಾನ್ ಲೇಔಟ್, ಎಂ.ಆರ್.ಪಾಳ್ಯ, ದೊಡ್ಡಮ್ಮ ಲೇಔಟ್, ವಿನಾಯಕ ಲೇಔಟ್, ಎಚ್‌ಎಂಟಿ ಲೇಔಟ್, ಆರ್‌ಬಿಐ ಕಾಲೊನಿ, ದಿಣ್ಣೂರು, ಎಸ್‌ಬಿಎಂ ಕಾಲೊನಿ, ಚಾಮುಂಡಿನಗರ ಹಾಗೂ ಸುತ್ತಮುತ್ತಲ ಪ್ರದೇಶಗಳು.

# ತುರ್ತು ನಿರ್ವಹಣೆ ನಿಮಿತ್ತ ಇಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

## ಕರೆಂಟ್ ಇರಲ್ಲ

**ಬೆಂಗಳೂರು:** ಬೆಸ್ಕಾಂ ವ್ಯಾಪ್ತಿಯ 66ಕೆ.ವಿ. ಎಲ್.ಆರ್.ಬಂಡೆ, ಗೆದ್ದಲಹಳ್ಳಿ, ಬಾಣಸವಾಡಿ, ಎಚ್.ಬಿ.ಆರ್. ಮತ್ತು ವಿದ್ಯಾನಗರ ಎಂ.ಯು.ಎಸ್.ಎಸ್ ವಿದ್ಯುತ್ ಉಪ- ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ಜ.12 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆ ತನಕ ವಿದ್ಯುತ್ ವ್ಯತ್ಯಯವಾಗಲಿದೆ.

ಎಚ್.ಬಿ.ಆರ್. 3ನೇ ಬ್ಲಾಕ್, ಟೀಚರ್ಸ್ ಕಾಲೋನಿ, ರಾಮದೇವ ಗಾರ್ಡನ್ ಯಾಸಿನ್ ನಗರ, ಸುಭಾಶ್ ಲೇಔಟ್, ಆಯಿಲ್ ಮಿಲ್ ರಸ್ತೆ, ಮಂಗಳ ಲೇಔಟ್, ಕರಿಯನ ಪಾಳ್ಯ, ಕೆ.ಎಸ್.ಎಫ್.ಸಿ ಲೇಔಟ್, ಕಾಚರಕನಹಳ್ಳಿ, ಅರವಿಂದನಗರ, ಲೋಕೇಶ್ ಟೆಂಟ್ ರಸ್ತೆ, ಭಾರತಿಯಾರ್ ರಸ್ತೆ, ಕಮ್ಮನಹಳ್ಳಿ ಮುಖ್ಯ ರಸ್ತೆ ಭಾಗ, ಮೇಯರ್ ಶಂಕರ್ ರಸ್ತೆ, ಜಲವಾಯು ವಿಹಾರ, ಎಚ್.ಆರ್.ಬಿ.ಆರ್. ಲೇಔಟ್, 2ನೇ ಬ್ಲಾಕ್, 3ನೇ ಬ್ಲಾಕ್, ಬಿ.ಟಿ.ಎಸ್.ಡಿಪೋ ಹಿಂಭಾಗ, ರಾಮಯ್ಯ ಲೇಔಟ್, ಹಾರ್ಮೋನಿ ಅಪಾರ್ಟ್‌ಮೆಂಟ್, ನಾಗದೇವಿ ಇಂಡಸ್ಟೀಸ್, ಕರಮಚಂದ್ರ ಲೇಔಟ್, ಅಮಲ ಇಂಜಿನಿಯರಿಂಗ್, ಜಾನಕಿರಾಮ್ ಲೇಔಟ್, ಬಾಣಸವಾಡಿ ರೈಲ್ವೆ ಸ್ಟೇಷನ್ ರಸ್ತೆ, ಡಾನ್ ಬಾಸ್ಕೋ ಚರ್ಚ್, ಎಲ್.ಆರ್.ಪಿ ಹಳ್ಳಿ, ಸೇಟ್ ಪಾಳ್ಯ, ಹೆಣ್ಣೂರು ಮುಖ್ಯ ರಸ್ತೆ, ಗೋವಿಂದ ಪುರ ಮುಖ್ಯ ರಸ್ತೆ, ರಶದ್ ನಗರ, ಫರೀದಾ ಶೂ ಫ್ಯಾಕ್ಟರಿ, ಅರೇಬಿಕ್ ಕಾಲೇಜ್, ಕೆ.ಜಿ. ಹಳ್ಳಿ, ಗೋವಿಂದಪುರ ಹಳ್ಳಿ, 5ನೇ ಬ್ಲಾಕ್, ಎಚ್.ಬಿ.ಆರ್. ನಾಗಾವರ ಮುಖ್ಯ ರಸ್ತೆ, ನಾಗಾವರ, ಎನ್.ಜಿ.ಕೆ ಗಾರ್ಮೆಂಟ್ಸ್, ಬೈರನಕುಂಟೆ, ಕುಪ್ಪುಸ್ವಾಮಿ ಲೇಔಟ್, ಎಚ್.ಕೆ.ಬಿ.ಕೆ. ಕಾಲೇಜ್, 4ನೇ ಮತ್ತು 5ನೇ ಎಚ್.ಬಿ.ಆರ್. ಲೇಔಟ್, ವಿದ್ಯಾ ಸಾಗರ್, ಥಣಿಸಂದ್ರ, ಆರ್. ಕೆ. ಹೆಗ್ಡೆನಗರ, ಕೆ. ನಾರಾಯಣಪುರ, ಎನ್.ಎನ್.ಹಳ್ಳಿ, ಬಾಲಾಜಿ ಲೇಔಟ್, ಫೇಸ್ 1 ಯಿಂದ 3, ರೈಲ್ವೆ ಮೆನ್ಸ್ ಲೇಔಟ್, ಬಿ.ಡಿ.ಎಸ್. ಲೇಔಟ್, ಸೆಂಟ್ರಲ್ ಎಕ್ಸೈಸ್, ಬೈರವಿ ಅಪಾರ್ಟ್‌ಮೆಂಟ್ ಓನ್ಲಿ, ಕೆ.ಇ.ಬಿ. ಟಿ.ಸಿ., ಶೋಭ ಅಪಾರ್ಟ್‌ಮೆಂಟ್ಸ್, ಥಣಿಸಂದ್ರ, ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ಟ್ ಜಯಂತಿ ಕಾಲೇಜ್, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತನೂರು, ಪಟೇಲ್ ರಾಮಯ್ಯ ಲೇಔಟ್, ಅಬಿಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಕ್ರಾಸ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ಕನಕ ಶ್ರೀ ಲೇಔಟ್, ಗೆದ್ದಲ ಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ ಲೇಔಟ್, ಟ್ರಿನಿಟಿ ಫಾರ್ಚೂನ್, ಮೈಕಲ್ ಸ್ಕೂಲ್, ಬಿ.ಎಚ್. ಕೆ. ಇಂಡಸ್ಟೀಸ್, ಜಾನಕೀ ರಾಮ್ ಲೇಔಟ್, ವಡ್ಡರ ಪಾಳ್ಯ, ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಬೈರತಿ ಹಳ್ಳಿ, ಕೆ.ಆರ್.ಸಿ, ದೊಡ್ಡಗುಬ್ಬಿ ಕ್ರಾಸ್, ಕುವೆಂಪು ಲೇಔಟ್, ಸಂಗಂ ಎನ್‌ಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮೇಗೌಡ ಲೇಔಟ್, ಬಿ.ಇ.ಎಲ್. ಕಾರ್ಪೊರೇಟ್ ಆಫೀಸ್, ಚಂಕ್ಯ ಲೇಔಟ್, ನಾಗವಾರ, ಎಂ.ಎಸ್. ರಾಮಯ್ಯ ನಾರ್ಥ್ ಸಿಟಿ, ಥಣಿಸಂದ್ರ ಮುಖ್ಯರಸ್ತೆ, ಆಶೀರ್ವಾದ್‌ನಗರ, ಅಮರಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯರಸ್ತೆ, ಮೆಸ್ತಿ ಪಾಳ್ಯ, ರಾಯಲ್ ಎನ್‌ಕ್ಲೇವ್, ಶ್ರೀ ರಾಮಪುರ ಗ್ರಾಮ, ವಿ.ಎಚ್.ವಿ.ಸಿ.ಎಸ್. ಲೇಔಟ್, ದಾಸರಹಳ್ಳಿ ಏರಿಯಾ, ಎ.ಕೆ. ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್.ಟಿ.ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಮಿಲಿಟರಿ ಏರಿಯಾ, ಕೆ.ಚನ್ನಸಂದ್ರ, ಚಳ್ಳಕೆರೆ, ಜಯಂತಿ ಗ್ರಾಮ ಹೊಯ್ಸಳನಗರ, ಹೊರಮಾವು, ಹೊರಮಾವು ಆಗರ, ಹೆಣ್ಣೂರು ಗ್ರಾಮ, ಮೇಘನಪಾಳ್ಯ, ಗೆದ್ದಲಹಳ್ಳಿ, ಕೊತನೂರು, ವಡರ ಪಾಳ್ಯ, ಚಳ್ಳಕೆರೆ ಗ್ರಾಮ, ಮತ್ತು ಸುತ್ತಲಿ ಪ್ರದೇಶ, ಎಸ್.ಪಾಳ್ಯ, ಆರ್.ಎಸ್.ಪಾಳ್ಯ, ಕಮ್ಮನಹಳ್ಳಿ ಮುಖ್ಯರಸ್ತೆ, ಬಾಣಸವಾಡಿ ಮುಖ್ಯರಸ್ತೆ., ಎರ್ರಪ್ಪ ರೆಡ್ಡಿ ಲೇಔಟ್, ಚಿಕ್ಕ ಬಾಣಸವಾಡಿ, ಬಿ.ಎಸ್.ಪಾಳ್ಯ, ಜಿ.ಎನ್.ಆರ್. ಗಾರ್ಡನ್, ಫೊಲೊಟಿನ್ ಸ್ಕೂಲ್ ಪ್ರದೇಶ, ಕ್ಯಾಲಸನಹಳ್ಳಿ, ಹಿದಾಯತ ನಗರ. ಕೆ.ಜಿ.ಹಳ್ಳಿ, ಲಿಡ್ಕರ್ ಕಾಲೋನಿ, ಚುನ ಲೈನ್, ನಾಗವಾರ ಮುಖ್ಯರಸ್ತೆ, ಲಿಂಗರಾಜಪುರ ಭಾಗ, ಮತ್ತು ಎಚ್.ಬಿ.ಆರ್. ಲೇಔಟ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹೊರಮಾವು 3ನೇ ಬ್ಲಾಕ್, ಎಚ್.ಬಿ.ಆರ್. ಗೋವಿಂದಪುರ, ಕರಾವಳಿ ರಸ್ತೆ, ಎಚ್.ಆರ್.ಬಿ.ಆರ್ 3ನೇ ಬ್ಲಾಕ್, ರಾಮಯ್ಯ ಲೇಔಟ್, ನಾಗದೇವಿ ಇಂಡಸ್ಟೀಸ್, ನೀಲಗಿರೀಸ್ ರಸ್ತೆ, ನೆಹರು ರಸ್ತೆ, ಅರವಿಂದನಗರ, ಮಂಗಳ ಲೇಔಟ್, ಆಯಿಲ್ ಮಿಲ್ ರಸ್ತೆ, ಬಾಣಸವಾಡಿ ಓ.ಎಂ.ಬಿ.ಆರ್. ಲೇಔಟ್, ವಿಜಯ ಬ್ಯಾಂಕ್ ಕಾಲೋನಿ, ರಾಮಮೂರ್ತಿನಗರ ಮುಖ್ಯರಸ್ತೆ, ಅಣ್ಣಯ್ಯ ರೆಡ್ಡಿಲೇಔಟ್, ಲಕ್ಷ್ಮಮ್ಮಲೇಔಟ್, ವಿಜಯ ಬ್ಯಾಂಕ್ ಕಾಲೋನಿ, ಎಚ್.ಆರ್ .ಬಿ.ಆರ್. ಲೇಔಟ್ ಸರ್ವೀಸ್ ರಸ್ತೆ, ಚನ್ನಸಂದ್ರ, ಪಿಳ್ಳಾರೆಡ್ಡಿನಗರ, ಎನ್.ಜಿ.ಇ.ಎಫ್ .ನ ಪೂರ್ವಭಾಗ, ಕಸ್ತೂರಿನಗರ, ಕನೋಫಿ ಅಪಾರ್ಟ್‌ಮೆಂಟ್, ಮಲ್ಲಪ್ಪ ಲೇಔಟ್, ಬ್ಯಾಂಕ್ ಅವೆನ್ಯೂ, ನಂಜಪ್ಪ ಲೇಔಟ್, ಎ.ಡಿ.ಎಂ.ಸಿ., ಎ.ಎಫ್.ಎನ್.ಎಚ್.ಬಿ, ಬಾಬೂಸಾ ಪಾಳ್ಯ, ಹೊರಮಾವು, ಪ್ರಕೃತಿ ಲೇಔಟ್, ಹೊರಮಾವು ಆಗರ, ವಿಜಯ ಬ್ಯಾಂಕ್ ಕಾಲೋನಿ ಭಾಗ, ಸುಬ್ಬಯ್ಯನಪಾಳ್ಯ, ಎಚ್.ಆರ್.ಬಿ.ಆರ್. ಲೇಔಟ್1ನೇ ಬ್ಲಾಕ್, ಕಮ್ಮನಹಳ್ಳಿ 80 ಅಡಿ ರಸ್ತೆ, ಬಾಣಸವಾಡಿ, ಸೇನಾವಿಹಾರ, 2ನೇ ಬ್ಲಾಕ್, 1ನೇ ಬ್ಲಾಕ್ ಎಚ್.ಆರ್.ಬಿ.ಆರ್. ಲೇಔಟ್, ರೇವಾ ಕಾಲೇಜ್, ನಿರಂತರ ಲೇಔಟ್, ನೇತಾಜಿನಗರ, ವಿದ್ಯಾನಗರ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಕನ್ನಡಪ್ರಭ 12/1/2010

# ಹೆಬ್ಬಾಳ ಸುತ್ತ ಇಂದಿನಿಂದ ವಿದ್ಯುತ್ ಕಟ್

## 20 ದಿನ ವಿದ್ಯುತ್ ಸ್ಥಾವರದ ದುರಸ್ತಿ ಕಾರ್ಯ | ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಬಂದು, ಹೋಗುತ್ತೆ

- ಹೆಬ್ಬಾಳ, ನಾಗವಾರ ಸುತ್ತಮುತ್ತ ಪದೇಪದೇ ಎದುರಾಗುತ್ತಿದ್ದ ವಿದ್ಯುತ್ ಸಮಸ್ಯೆ
- ಕೆಪಿಟಿಸಿಎಲ್ 66/11 ಕೆವಿ ಸಾಮರ್ಥ್ಯದ ವಿದ್ಯುತ್ ಸ್ಥಾವರದಲ್ಲಿ ದುರಸ್ತಿ
- ಇಂದಿನಿಂದ 31ರ ವರೆಗೆ ದುರಸ್ತಿ ಕಾರ್ಯ ಹಮ್ಮಿಕೊಂಡಿರುವ ಕೆಪಿಟಿಸಿಎಲ್
- ಫೀಡರ್, ವಿದ್ಯುತ್ ಪರಿವರ್ತಕ, ಮಾರ್ಗ ಬದಲಾವಣೆ ಸಮಯದಲ್ಲಿ ಕೈಕೊಡಲಿರುವ ವಿದ್ಯುತ್‌ಶಕ್ತಿ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಹೆಬ್ಬಾಳ ಹಾಗೂ ನಾಗವಾರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶುಕ್ರವಾರದಿಂದ (ಜ.12) ಸುಮಾರು 20 ದಿನ ವಿದ್ಯುತ್ ಕಣ್ಣಾಮುಚ್ಚಾಲೆ ಆಟ ಆಡಲಿದೆ.

ಈ ಭಾಗದಲ್ಲಿ ಪದೇ ಪದೇ ಎದುರಾಗುತ್ತಿರುವ ವಿದ್ಯುತ್ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ಮುಂದಾಗಿರುವ ಕೆಪಿಟಿಸಿಎಲ್ 66/11 ಕೆವಿ ಸಾಮರ್ಥ್ಯದ ವಿದ್ಯುತ್ ಸ್ಥಾವರದ ವ್ಯಾಪ್ತಿಯ ಮಾರ್ಗದಲ್ಲಿ ಜ.12 ರಿಂದ ಜ.31ರ ವರೆಗೆ ದುರಸ್ತಿ ಮಾಡಲಿದೆ. ಇದರ ಪರಿಣಾಮವಾಗಿ ಶುಕ್ರವಾರದಿಂದ 20 ದಿನ ವಿದ್ಯುತ್ ಪೂರೈಕೆಯಲ್ಲಿ ತೀವ್ರ ಸ್ವರೂಪದಲ್ಲಿ ವ್ಯತ್ಯಯ ಕಂಡು ಬರಲಿದೆ.

ಎಲ್.ಆರ್ ಬಂಡೆ, ಗೆದ್ದಲಹಳ್ಳಿ, ಬಾಣಸವಾಡಿ, ಎಚ್‌ಬಿಆರ್ ಹಾಗೂ ವಿದ್ಯಾನಗರದ ವಿದ್ಯುತ್ ಪರಿವರ್ತಕಗಳ ದುರಸ್ತಿ ಕಾರ್ಯ ಆರಂಭಿಸಿ ಕಯೋಟ್ ಕಂಡಕ್ಟರ್ ಉಪಕರಣ ಅಳವಡಿಸಬೇಕಾಗಿದೆ. ಈ ಹಿನ್ನಲೆಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಕೆಪಿಟಿಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ಎಲ್.ಆರ್.ಬಂಡೆ ವ್ಯಾಪ್ತಿಯಲ್ಲಿ ಮೊದಲು ದುರಸ್ತಿ ಕಾರ್ಯ ಆರಂಭವಾಗಲಿದೆ. ಹೆಚ್ಚು ದಿನಗಳ ಕಾಲ ದುರಸ್ತಿ ಕೈಗೊಳ್ಳುವುದರಿಂದ ಅಷ್ಟೂ ದಿನ ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ಆಗಾಗ್ಗೆ ವಿದ್ಯುತ್ ಬಂದು ಹೋಗಲಿದೆ. ದುರಸ್ತಿ ಕಾರ್ಯದಿಂದ ಗ್ರಾಹಕರಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಲಾಗಿದ್ದು, ಸೀಮಿತ ಅವಧಿಯಲ್ಲಿ ದುರಸ್ತಿ ನಡೆದರೂ, ಆಗಾಗ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಬಹುದು. ಆದರೆ, ಫೀಡರ್, ಪರಿವರ್ತಕ, ಮಾರ್ಗ ಬದಲಾವಣೆ ಸಮಯದಲ್ಲಿ ಮಾತ್ರ ವಿದ್ಯುತ್ ಕೆಲ ಸಮಯ ಅಡೆತಡೆಯಾಗಲಿದೆ ಎಂದು ತಿಳಿಸಲಾಗಿದೆ.

**ವಿದ್ಯುತ್ ವ್ಯತ್ಯಯದ ಪ್ರದೇಶಗಳು:** ಎಚ್.ಬಿ.ಆರ್ 3ನೇ ಹಂತ, ಟೀಚರ್ಸ್ ಕಾಲೋನಿ, ರಾಮದೇವ ಗಾರ್ಡನ್, ಯಾಸಿನ್‌ನಗರ, ಸುಭಾಷ್ ಲೇಔಟ್, ಆಯಿಲ್ ಮಿಲ್ ರಸ್ತೆ, ಮಂಗಳಾ ಲೇಔಟ್, ಕರಿಯಣ್ಣ ಪಾಳ್ಯ, ಕೆಎಸ್‌ಎಫ್‌ಸಿ ಲೇಔಟ್, ಕಾಚರಕನಹಳ್ಳಿ, ಅರವಿಂದ ನಗರ, ಲೋಕೇಶ್ ಟೆಂಟ್ ರಸ್ತೆ, ಭಾರತಿಯಾರ್ ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆಯ ಕೆಲ ಭಾಗಗಳು, ಮೇಯರ್ ಶಂಕರ್ ರಸ್ತೆ, ಜಲ ವಾಯು ವಿಹಾರ್, ಎಚ್‌ಆರ್‌ಬಿಆರ್ ಲೇಔಟ್‌ನ 2ನೇ ಹಂತ, 3ನೇ ಹಂತ, ಬಿಟಿಎಸ್ ಡಿಪೋ ಹಿಂಭಾಗ, ರಾಮಯ್ಯ ಲೇಔಟ್, ಹಾರ್ಮನಿ ಅಪಾರ್ಟ್‌ಮೆಂಟ್, ನಾಗದೇವಿ ಕೈಗಾರಿಕಾ ಪ್ರದೇಶ, ಕರಿಯಣ್ಣಪಾಳ್ಯ, ಕುಮಾರಚಂದ್ರ ಲೇಔಟ್, ಜಾನಕಿರಾಮ್ ಲೇಔಟ್, ಬಾಣಸವಾಡಿ ರೈಲ್ವೇ ನಿಲ್ದಾಣ ರಸ್ತೆ, ಡಾನ್ ಬಾಸ್ಕೋ ಚರ್ಚ್, ಲಿಂಗರಾಜಪುರ ಗ್ರಾಮ, ಹೆಣ್ಣೂರು ಮುಖ್ಯ ರಸ್ತೆ, ರಶದ್‌ನಗರ, ಗೋವಿಂದಪುರ ಮುಖ್ಯರಸ್ತೆ, ಫರೀದ ಶೂ ಫ್ಯಾಕ್ಟರಿ, ಕಾಡುಗೊಂಡನಹಳ್ಳಿ, ಅರೇಬಿಕ್ ಕಾಲೇಜ್, ಗೋವಿಂದಪುರ ಗ್ರಾಮ 5ನೇ ಹಂತ, ಎಚ್‌ಬಿಆರ್ ನಾಗವಾರ ಮುಖ್ಯರಸ್ತೆ, ಎನ್‌ಜೆಕೆ ಗಾರ್ಮೆಂಟ್ಸ್.

ಥಣಿಸಂದ್ರ, ಹೆಗಡೆ ನಗರ, ಕೆ.ನಾರಾಯಣಪುರ, ಎನ್.ನಾಗೇನಹಳ್ಳಿ, ಕೆ.ನಾರಾಯಣಪುರ, ಎನ್.ಎನ್.ಹಳ್ಳಿ, ಬಾಲಾಜಿ ಲೇಔಟ್‌ನ 1ರಿಂದ 3ನೇ ಹಂತದವರೆಗಿನ ಪ್ರದೇಶ, ರೈಲ್ವೆ ಮೆನ್ಸ್ ಲೇಔಟ್, ಬಿಡಿಎಸ್ ಲೇಔಟ್, ಸೆಂಟ್ರಲ್ ಎಕ್ಸೈಜ್, ಭೈರವಿ ಅಪಾರ್ಟ್‌ಮೆಂಟ್, ಎಚ್‌ಬಿಆರ್ 3ನೇ ಬ್ಲಾಕ್, ಶೋಭಾ ಅಪಾರ್ಟ್‌ಮೆಂಟ್ ಥಣಿಸಂದ್ರ, ಹೆಣ್ಣೂರು ಬಂಡೆ, ಸಾಮುದ್ರಿಕಾ ಎಕ್ಲೇವ್, ಗ್ರೆಸ್ ಗಾರ್ಡನ್, ಕ್ರಿಸ್ತಜ್ಯೋತಿ ಕಾಲೇಜು, ಕೆ.ನಾರಾಯಣಪುರ, ಬಿಳಿ ಶಿವಾಲೆ, ಆಶಾಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಾಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಅಡ್ಡರಸ್ತೆ, ಬಿಡಿಎಸ್ ಗಾರ್ಡನ್, ಕೊತ್ತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿಎಸ್‌ಐ ಗೇಟ್, ಬೈರತಿ ಗ್ರಾಮ, ಬೈರತಿ ಕ್ರಾಸ್, ಎವರ್‌ಗ್ರೀನ್ ಲೇಔಟ್, ಕನಕಶ್ರೀ ಲೇಔಟ್, ಗೆದ್ದಲಹಳ್ಳಿ, ಬ್ಲೆಸ್ಸಿಂಗ್ ಗಾರ್ಡನ್, ಮಂತ್ರಿ ಅಪಾರ್ಟ್‌ಮೆಂಟ್, ಹಿರೇಮಠ್ ಲೇಔಟ್, ಟ್ರಿನಿಟಿ ಫಾರ್ಚೂನ್.

ಮೈಕೆಲ್ ಸ್ಕೂಲ್, ಬಿಎಚ್‌ಕೆ ಇಂಡಸ್ಟ್ರೀಸ್, ಜಾನಕಿರಾಮ್ ಲೇಔಟ್, ವಡ್ಡರಪಾಳ್ಯ, ಅನುರಾಗ ಲೇಔಟ್, ಕಾವೇರಿ ಲೇಔಟ್, ಕುವೆಂಪು ಲೇಔಟ್, ಆತ್ಮಾವಿದ್ಯಾ ನಗರ ಬೈರತಿ ಗ್ರಾಮ, ದೊಡ್ಡಗುಬ್ಬಿ ಕ್ರಾಸ್, ಸಂಗಮ್ ಎಕ್ಲೇವ್, ಬೈರತಿ ಬಂಡೆ, ನಕ್ಷತ್ರ ಲೇಔಟ್, ತಿಮ್ಮಗೌಡ ಲೇಔಟ್, ಬಿಇಎಲ್ ಕಾರ್ಪೋರೇಟ್ ಆಫೀಸ್, ಚಾಣಕ್ಯ ಲೇಔಟ್, ನಾಗವಾರ, ಎಂ.ಎಸ್.ರಾಮಯ್ಯ ನಾರ್ತ್ ಸಿಟಿ, ಥಣಿಸಂದ್ರ ಮುಖ್ಯರಸ್ತೆ, ಆಶೀರ್ವಾದ ನಗರ, ಅಮರಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯರಸ್ತೆ, ಮೇಸ್ತ್ರೀ ಪಾಳ್ಯ, ರಾಯಲ್ ಎಕ್ಲೇವ, ಶ್ರೀರಾಮಪುರ ಗ್ರಾಮ, ವಿಎಚ್‌ವಿಸಿಎಸ್ ಲೇಔಟ್, ದಾಸರಹಳ್ಳಿ ಪ್ರದೇಶ, ಎಕೆ ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್‌ಟಿ ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಮಿಲಟರಿ ಏರಿಯಾ, ಕೆ.ಚನ್ನಸಂದ್ರ, ಚಳ್ಳಕೆರೆ, ಜಯಂತಿ ಗ್ರಾಮ, ಹೊಯ್ಸಳನಗರ.

ಹೊರಮಾವು, ಅಗರ, ಹೆಣ್ಣೂರು ಗ್ರಾಮ, ಮೇಘನಾಪಾಳ್ಯ, ಗೆದ್ದಲಹಳ್ಳಿ, ಕೊತ್ತನೂರು, ಎಸ್.ಪಾಳ್ಯ, ಆರ್.ಎಸ್.ಪಾಳ್ಯ, ಕಮ್ಮನಹಳ್ಳಿ ಮುಖ್ಯರಸ್ತೆ, ಬಾಣಸವಾಡಿ ಮುಖ್ಯರಸ್ತೆ, ಈರಪ್ಪ ರೆಡ್ಡಿ ಲೇಔಟ್, ಚಿಕ್ಕಬಾಣಸವಾಡಿ, ಬಿ.ಎಸ್.ಪಾಳ್ಯ, ಜಿಎನ್‌ಆರ್ ಗಾರ್ಡನ್, ಪೋಲೊಟಿನ್ ಸ್ಕೂಲ್, ಕ್ಯಾಲಸನಹಳ್ಳಿ, ಹಿದಾಯತ್‌ನಗರ, ಕೆ.ಜಿ.ಹಳ್ಳಿ, ಲಿಡ್ಕರ್ ಕಾಲೋನಿ, ಚುನಲೈನ್, ನಾಗವಾರಮುಖ್ಯರಸ್ತೆ, ಬಿಡಬ್ಲ್ಯುಎಸ್‌ಎಸ್‌ಬಿ ಹೊರಮಾವು, 3ನೇ ಹಂತ, ಗೋವಿಂದಪುರ, ಎಚ್‌ಬಿಆರ್ ಲೇಔಟ್, ಕರಾವಳಿ ರಸ್ತೆ, ಎಚ್‌ಬಿಆರ್ 3ನೇ ಬ್ಲಾಕ್ ರಾಮಯ್ಯ ಲೇಔಟ್, ನಾಗದೇವಿ ಇಂಡಸ್ಟ್ರೀಸ್, ನೀಲಗಿರಿ ರಸ್ತೆ, ಅರವಿಂದನಗರ, ಮಂಗಳ ಲೇಔಟ್, ಆಯಿಲ್‌ಮಿಲ್ ರಸ್ತೆ, ಬಾಣಸವಾಡಿ ಒಎಂಬಿಆರ್ ಲೇಔಟ್, ವಿಜಯ ಬ್ಯಾಂಕ್ ಕಾಲೋನಿ, ರಾಮಮೂರ್ತಿ ನಗರ ಮುಖ್ಯರಸ್ತೆ ಅಣ್ಣಯ್ಯ ರೆಡ್ಡಿ ಲೇಔಟ್, ಲಕ್ಷ್ಮಮ್ಮ ಲೇಔಟ್, ಎನ್‌ಜಿಇಎಫ್ ಪೂರ್ವ, ಚನ್ನಸಂದ, ಪಿಲ್ಲರೆಡ್ಡಿ ನಗರ, ಎನ್‌ಜಿಎಫ್ ಪೂರ್ವ, ಕಸ್ತೂರಿನಗರ, ಕನೋಪಿ ಅಪಾರ್ಟ್‌ಮೆಂಟ್, ಮಲ್ಲಪ್ಪ ಲೇಔಟ್, ಬ್ಯಾಂಕ್ ಅವೆನ್ಯೂ, ನಂಜಪ್ಪ ಲೇಔಟ್, ಬಾಬೂಸಾಪಾಳ್ಯ, ಪ್ರಕೃತಿ ಲೇಔಟ್, ಸುಬ್ಬಯ್ಯನಪಾಳ್ಯ, ರಾಮಸ್ವಾಮಿಪಾಳ್ಯ, ಎಚ್‌ಬಿಆರ್ ಲೇಔಟ್ 1ನೇ ಬ್ಲಾಕ್, ಕಮ್ಮನಹಳ್ಳಿ 80 ಅಡಿ ರಸ್ತೆ, ಸೇನಾವಿಹಾರ್, ರೇವಾ ಕಾಲೇಜು, ನಿರಂತರ ಲೇಔಟ್, ನೇತಾಜಿನಗರ, ವಿದ್ಯಾನಗರ ಹಾಗೂ ಸುತ್ತಲಿನ ಪ್ರದೇಶಗಳು.

# ಸುದ್ದಿ ಕೋಶ 360°



# ಭಾರತಕ್ಕೆ ಇ-ಕಾರುಬಾರು ಸವಾಲುಗಳು

● ಸದಾಶಿವ ಕೆ.

ಪೆಟ್ರೋಲ್, ಡೀಸೆಲ್ ಬಳಕೆ ಇನ್ನೆಷ್ಟು ವರ್ಷವೋ ಗೊತ್ತಿಲ್ಲ. ಪರ್ಯಾಯ ಇಂಧನದ ಬಗ್ಗೆ ಯೋಚನೆ, ಯೋಜನೆ ಚಾಲ್ತಿಯಲ್ಲಿದ್ದರೂ ಅದರ ಬಳಕೆಗೆ ಒತ್ತು ಹೆಚ್ಚಿದೆ. ಭಾರತದಲ್ಲಿ ವಿದ್ಯುತ್ ಕಾರುಗಳು ಹೆಚ್ಚಾಗಿ ಬಳಕೆಯಾಗಬೇಕು ಎಂಬ ಒತ್ತಾಸೆಯೂ ಇದೆ. ಗೃಹ, ಕೈಗಾರಿಕೆ ಬಳಕೆಗೆ ವಿದ್ಯುತ್ ಪೂರೈಕೆ ತ್ರಾಸದಾಯಕವಾಗಿರುವಾಗ ವಿದ್ಯುತ್ ಕಾರು ಸಾಧ್ಯವಾದೀತೇ ಎನ್ನುವುದು ಪ್ರಶ್ನೆ. 2030ರ ವೇಳೆಗೆ ಇಲೆಕ್ಟ್ರಿಕ್ ಕಾರುಗಳು ರಸ್ತೆಯಲ್ಲಿ ಓಡಾಡಬೇಕು ಎಂದು ಸರ್ಕಾರದ ವತಿಯಿಂದಲೇ ಒತ್ತಾಸೆ ಇದ್ದರೂ, ಸಾಕಷ್ಟು ಸವಾಲುಗಳಿವೆ.



### ಪಿಯೂಷ್ ಗೋಯಲ್ ಹೇಳಿದ್ದು



ಕೇಂದ್ರ ಇಂಧನ ಖಾತೆ ಸಹಾಯಕ ಸಚಿವ ಪಿಯೂಷ್ ಗೋಯಲ್ 2017ರ ಏ.18 ರಂದು ಮೈಸೂರಿನಲ್ಲಿ ಕಾರ್ಯಕ್ರಮವೊಂದಕ್ಕೆ ಬಂದಿದ್ದಾಗ 2030ರ ವೇಳೆಗೆ ಭಾರತದಲ್ಲಿ ಕೇವಲ ವಿದ್ಯುತ್ ಕಾರುಗಳೇ ಉತ್ಪಾದನೆಯಾಗಿ, ಮಾರಾಟವಾಗಬೇಕು ಎಂದು ಹೇಳಿದ್ದರು. ಅದಕ್ಕಾಗಿಯೇ ಕೇಂದ್ರದ ವತಿಯಿಂದ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದಿದ್ದರು. ಸೌರ ಶಕ್ತಿಯನ್ನು ಹೆಚ್ಚು ಬಳಸಲು ಪ್ರೋತ್ಸಾಹ ನೀಡುವುದಕ್ಕೆ, ಪರಿಸರ ಕಾಪಾಡುವ ನಿಟ್ಟಿನಲ್ಲಿ ಇಂಥ ಕ್ರಮ ಅಗತ್ಯ. ಈ ಬಗ್ಗೆ ನೀತಿ ಆಯೋಗ ಯೋಜನೆ ಸಿದ್ಧ ಮಾಡುತ್ತಿದೆ ಎಂದು ಹೇಳಿದ್ದರು.

### ಬಾಬು ಲಾಲ್ ಸುಪ್ರಿಯೋ ಹೇಳಿದ್ದು



ಭಾರಿ ಕೈಗಾರಿಕೆ ಖಾತೆ ಸಹಾಯಕ ಸಚಿವ ಬಾಬುಲಾಲ್ ಸುಪ್ರಿಯೋ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ 2030ರ ವೇಳೆಗೆ ದೇಶಾದ್ಯಂತ ಪೂರ್ತಿಯಾಗಿ ವಿದ್ಯುತ್ ಕಾರುಗಳನ್ನು ಓಡಿಸುವ ಪ್ರಸ್ತಾಪ ಇಲ್ಲ ಎಂದು ಹೇಳಿದ್ದಾರೆ.

### ಕೊರತೆ ಉಂಟು

ದೇಶದಲ್ಲಿ ಗೃಹ, ಕೈಗಾರಿಕೆ ಮತ್ತು ಇತರ ಬಳಕೆಗೆ ವಿದ್ಯುತ್ ಕೊರತೆ ಇದೆ. ಜಲವಿದ್ಯುತ್ ಯೋಜನೆಗಳಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಕಲ್ಲಿದ್ದಲಿನಿಂದ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಶೇ.90ರಷ್ಟು ಪಾಲು ಕಲ್ಲಿದ್ದಲಿನಿಂದಲೇ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಹೀಗಾಗಿ, ಯೋಜನೆ ಕಷ್ಟ ಎನ್ನುತ್ತಾರೆ ತಜ್ಞರು.

### ಬೆಂಗಳೂರಿನಲ್ಲಿ

ಕರ್ನಾಟಕ ಸರ್ಕಾರದ ವತಿಯಿಂದ ಗುತ್ತಿಗೆ ಆಧಾರದಲ್ಲಿ ಬೆಂಗಳೂರಿನಲ್ಲಿ ವಿದ್ಯುತ್ ಬಸ್ ಓಡಿಸುವ ಬಗ್ಗೆ ನಡೆದಿದೆ ಚಿಂತನೆ



> ವಿದ್ಯುತ್ ಕಾರುಗಳಿಗೆ ಸಂಸ್ಥೆಗಳಿಂದ ಮೊದಲು ಆದ್ಯತೆ ಬರಲಿದೆ. ಸದ್ಯಕ್ಕೆ ವೈಯಕ್ತಿಕ ಖರೀದಿಗೆ ಸೂಕ್ತವಾದದ್ದಲ್ಲ. ಶೀಘ್ರದಲ್ಲಿಯೇ ಆ ಸಮಯ ಕೂಡ ಬರಬಹುದು. ಚೀನಾ ಮತ್ತು ಐರೋಪ್ಯ ಒಕ್ಕೂಟಗಳಿಗೆ ಹೋಲಿಕೆ ಮಾಡಿದರೆ ಭಾರತದಲ್ಲಿ ವಿದ್ಯುತ್ ಕಾರುಗಳು ಬಂದರೆ ಅದರ ಪ್ರಭಾವ ಬೇರೆಯೇ ಇರುತ್ತದೆ.
>
> ● ಪವನ್ ಗೋಯೆಂಕಾ, ಮಹೀಂದ್ರಾ ಆ್ಯಂಡ್ ಮಹೀಂದ್ರಾ ಎಂ.ಡಿ.

### ಮಹೀಂದ್ರಾ ಕಾರು

ದೇಶದಲ್ಲಿ ಮೊದಲ ಬಾರಿಗೆ ವಿದ್ಯುತ್ ಕಾರುಗಳನ್ನು ಹೊರ ತಂದ ಹೆಗ್ಗಳಿಕೆ ರೇವಾ ಕಂಪನಿಯದ್ದು, ಅದೂ ಬೆಂಗಳೂರಿನಲ್ಲಿ ಎನ್ನುವುದು ಪ್ರಮುಖಾಂಶ. ನಂತರದ ವರ್ಷಗಳಲ್ಲಿ ಅದನ್ನು ಮಹೀಂದ್ರಾ ಆ್ಯಂಡ್ ಮಹೀಂದ್ರಾ ಖರೀದಿಸಿತು. ಈಗ ಅದು ಎರಡು ಮಾದರಿಯ ಕಾರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ದೇಶಾದ್ಯಂತ ಮಾರುಕಟ್ಟೆ ವಿಸ್ತರಣೆ ಮತ್ತು ಉತ್ಪಾದನೆಗಾಗಿ ಕಂಪನಿ ಸದ್ಯಕ್ಕೆ 600 ಕೋಟಿ ರೂ. ಹೂಡಿಕೆ ಮಾಡಲಿದೆ.

### ಟಾಟಾ ಮೋಟರ್ಸ್

ಸದ್ಯ ಮಾರುಕಟ್ಟೆಯಲ್ಲಿರುವ ಟಿಗೋರ್ ಕಾರ್‌ನ ಮುಂದಿನ ಆವೃತ್ತಿಯೇ ವಿದ್ಯುತ್ ಮಾದರಿಯದ್ದು. ದೆಹಲಿ ಸರ್ಕಾರದ ಎನರ್ಜಿ ಎಫಿಶಿಯನ್ಸಿ ಸರ್ವಿಸಸ್ ಲಿಮಿಟೆಡ್‌ಗಾಗಿ ಅದು 10 ಸಾವಿರ ಕಾರುಗಳನ್ನು ಉತ್ಪಾದಿಸಲಿದೆ.

### ಜಂಟಿ ಯೋಜನೆಗೆ ಸಿದ್ಧತೆ ಶುರು

ಪಿಯೂಷ್ ಗೋಯಲ್ ಹೇಳಿಕೆ ನೀಡಿದ್ದ ಬಳಿಕ ವಿದ್ಯುತ್ ಕಾರು ಉತ್ಪಾದನೆ ಬಗ್ಗೆ ಜಂಟಿ ಉದ್ದಿಮೆ ಸ್ಥಾಪಿಸುವ ಬಗ್ಗೆ ರೂಪುರೇಷೆ ಶುರುವಾಗಿದೆ. ಈ ಪೈಕಿ ಪ್ರಮುಖ ವಾದವುಗಳೆಂದರೆ

- ಸುಜುಕಿ, ಟೊಯೋಟಾ
- ರೆನಾಲ್ಟ್ ಮತ್ತು ನಿಸಾನ್
- ಮಹೀಂದ್ರಾ, ಫೋರ್ಡ್
- ಟಾಟಾ ಮೋಟರ್ಸ್

## ಜಗತ್ತಿನಲ್ಲಿ ವಿದ್ಯುತ್ ಕಾರುಗಳು

**6,45,000** ಚೀನಾದಲ್ಲಿ. ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಹೆದ್ದಾರಿ ಬದಿಯಲ್ಲಿ ಚಾರ್ಜಿಂಗ್ ಸ್ಟಾಟ್‌ಗಳು ಇರುವ ದೇಶ.

**5,70,000** ಅಮೆರಿಕದಲ್ಲಿ. ನಾರ್ವೆ: ವಿಶ್ವದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಕಾರು ಮಾರುಕಟ್ಟೆಗೆ ಬರುತ್ತದೆ.

**43%** ವಿಶ್ವದ ಅಷ್ಟು ವಿದ್ಯುತ್ ಕಾರುಗಳು ಚೀನಾದಲ್ಲಿಯೇ ಇವೆ.

**1,73,000** 2015ರಲ್ಲಿ ವಿದ್ಯುತ್ ಬಸ್‌ಗಳ ಸಂಖ್ಯೆ ಏರಿಕೆ

**15** ವರ್ಷ. ಈ ಅವಧಿಯೊಳಗೆ ದೇಶದಲ್ಲಿ ಇಲೆಕ್ಟ್ರಿಕ್ ಕಾರುಗಳು ಓಡಾಡಬೇಕೆಂದು ನೀತಿ ಆಯೋಗ ಸಿದ್ಧಪಡಿಸುತ್ತಿರುವ ಯೋಜನಾ ವರದಿ.

### ಎರಡೇ ವರ್ಷ

ದೇಶದ ಪ್ರಮುಖ ಕಾರು ಉತ್ಪಾದಕ ಕಂಪನಿ ಮಾರುತಿ-ಸುಜುಕಿ 2020ರ ವೇಳೆಗೆ ಕಂಪನಿಯ ಮೊದಲ ವಿದ್ಯುತ್ ಕಾರು ಸಿದ್ಧಪಡಿಸುವ ಗುರಿ ಹಾಕಿಕೊಂಡಿದೆ. ಅದಕ್ಕಾಗಿ ತೋಷಿಬಾ ಮತ್ತು ಡೆನ್ಸೋ ಕಂಪನಿಗಳ ಜತೆ ಲೀಥಿಯಂ-ಇಯಾನ್ ಬ್ಯಾಟರಿ ಉತ್ಪಾದಿಸಲು ಒಪ್ಪಂದ ಮಾಡಿಕೊಂಡಿದೆ. ಅದಕ್ಕೆ ಬೇಕಾಗುವ ಹೂಡಿಕೆ ಮೊತ್ತ 1,151 ಕೋಟಿ ರೂ. ಅಲ್ಲಿಯೇ ಕಾರುಗಳ ಉತ್ಪಾದನೆಯೂ ಆಗಲಿದೆ.

### ಸವಾಲುಗಳು-ಅಗತ್ಯಗಳು

- ಸದ್ಯ ವಿದ್ಯುತ್ ಕಾರಿನ ಬ್ಯಾಟರಿ ಉತ್ಪಾದನೆ ವೆಚ್ಚ ಅಧಿಕ. 2020ರ ವೇಳೆ ವೆಚ್ಚ ತಗ್ಗುವ ಸಂಭವ
- ಶೀಘ್ರ ಚಾರ್ಜಿಂಗ್ ವ್ಯವಸ್ಥೆ
- ನಗರ, ಪಟ್ಟಣಗಳಲ್ಲಿ ಪೆಟ್ರೋಲ್ ಬಂಕ್ ರೀತಿಯಲ್ಲಿ ಚಾರ್ಜಿಂಗ್ ಸ್ಟಾಟ್
- ಕೈಗೆಟುಕಬಹುದಾದ ದರದಲ್ಲಿ ಕಾರುಗಳ ಉತ್ಪಾದನೆ

### ಮುಂದೆ ಕೈಜೋಡಿಸುವ ಬಗ್ಗೆ ಪ್ರಸ್ತಾಪ

- ಹೋಂಡಾ ಮೋಟರ್ಸ್
- ಮರ್ಸಿಡಿಸ್ ಬೆಂಝ್
- ಬಿಎಂಡಬ್ಲ್ಯು
- ವೋಲ್ವೋ
- ಜೆಎಲ್ಆರ್

**1%** ಜಾಗತಿಕವಾಗಿ ವಿದ್ಯುತ್ ಕಾರುಗಳ ಪ್ರವೇಶ ಇನ್ನೂ ಶೇ.1ಕ್ಕಿಂತ ಕಡಿಮೆ

**12% -5%** ಸೊಸೈಟಿ ಆಫ್ ಇಂಡಿಯನ್ ಆಟೋಮೊಬೈಲ್ ಮಾನ್ಯುಫ್ಯಾಕ್ಚರರ್ಸ್ ವಿದ್ಯುತ್ ಕಾರುಗಳಿಗೆ ಶಿಫಾರಸು ಮಾಡಿದ ತೆರಿಗೆ ಕಡಿತದ ಪ್ರಮಾಣ

**10,000** ವಿದ್ಯುತ್ ಕಾರುಗಳು. ನವದೆಹಲಿ ಸರ್ಕಾರ ಟಾಟಾ ಮೋಟರ್ಸ್‌ಗೆ ನೀಡಿದ ಗುತ್ತಿಗೆ

**2,000** ಕೋಟಿ ರೂ. ಅದಕ್ಕೆ ಉಂಟಾಗುವ ವೆಚ್ಚ